## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀ ಕೆ. ಎಸ್. ಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಮತ್ತು ಶ್ರೀ ಮಂಜುನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಶೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಇವರ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯನ್ನು ಹಿಂಪಡೆಯುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 57 ವಿಸೇಬಿ 2009 ದಿ:24-01-2012.
2. ಶ್ರೀ ಎ. ಎಲ್. ಪೂಜಾರ್, ಇವರ ಮನವಿ ದಿನಾಂಕ:13-12-2013

------

**ಪ್ರಸ್ತಾವನೆ:**

2007-08ನೇ ಸಾಲಿನ ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಫಲರಾಗಿರುವ ಹಾಗೂ 2008-09 ನೇ ಸಾಲಿನ ಗ್ರಾಮೀಣ ಆಶ್ರಯ ಮತ್ತು ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳ ಪಟ್ಟಿಯು ಅನುಮೋದನೆಯಂತೆ ಕ್ರಮ ಕೈಗೊಳ್ಳುವಲ್ಲಿ ಉದಾಸೀನತೆ ತೋರಿ ಫಲಾನುಭವಿಗಳು ವಸತಿ ಸೌಲಭ್ಯದಿಂದ ವಂಚಿತರಾಗಲು ಕಾರಣರಾಗಿರುವ ಶ್ರೀ ಕೆ. ಎಸ್. ಗೋಪಾಲ್, ಶ್ರೀ ಮಂಜುನಾಥ್, ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಇವರುಗಳ ವಿರುದ್ಧ ಕನಾಸೇ (ವನಿಮೇ) 1957ರ ನಿಯಮಾವಳಿಗಳ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ಜರುಗಿಸಲು ಸದರಿ ನಿಯಮಗಳ 13 ರ ಅನುಸಾರ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಶ್ರೀ ಎ.ಎಲ್. ಪೂಜಾರ್, ನಿವೃತ್ತ ಜಿಲ್ಲಾ ಮತ್ತು ಸೆಶೆನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ಸದರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಮನವಿ ಸಲ್ಲಿಸಿ ಕಾರ್ಯಭಾರದ ಒತ್ತಡ ಅಧಿಕವಾಗಿರುವುದರಿಂದ ಪ್ರಕರಣದ ಜಂಟಿ ಇಲಾಖಾ ವಿಚಾರಣೆ ನಡೆಸಲು ಸಾಧ್ಯವಾಗದ ಕಾರಣ ಬೇರೊಬ್ಬ ವಿಚಾರಣಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಆದ್ದರಿಂದ ಈ ಪ್ರಕರಣದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಶ್ರೀ ಕೆ. ಎಸ್. ಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಮತ್ತು ಶ್ರೀ ಮಂಜುನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಶೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಇವರುಗಳ ವಿರುದ್ಧ ಕನಾಸೇ (ವನಿಮೇ) 1957ರ ನಿಯಮಾವಳಿಗಳ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ಜರುಗಿಸಲು ಸದರಿ ನಿಯಮಗಳ 13 ರ ಅನುಸಾರ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿರುವುದನ್ನು, ಅಪಾದಿತ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ ನಿಯಮ 12 (1) (ಎ) ಅನುಸಾರ ಶಿಸ್ತು ಕ್ರಮ ಕೈಗೊಳ್ಳುವ ಷರತ್ತಿಗೊಳಪಟ್ಟು ಹಿಂಪಡೆಯಲು ಸರ್ಕಾರವು ನಿರ್ಧರಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 57 ವಿಸೇಬಿ 2009 ಬೆಂಗಳೂರು ದಿನಾಂಕ: 03-02-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಕೆ. ಎಸ್. ಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಮತ್ತು ಶ್ರೀ ಮಂಜುನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಶೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಶ್ರೀನಿವಾಸಪುರ ಇವರುಗಳ ವಿರುದ್ಧ ಕನಾಸೇ (ವನಿಮೇ) 1957ರ ನಿಯಮಾವಳಿಗಳ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ಜರುಗಿಸಲು ಸದರಿ ನಿಯಮಗಳ 13 ರ ಅನುಸಾರ ಜಂಟಿ ಇಲಾಖಾ ವಿಚಾರಣೆಯ ದಿ: 24-01-2013 ರ ಸರ್ಕಾರಿ

ಆದೇಶವನ್ನು ಅಪಾದಿತ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ, ನಿಯಮ 12 (1) (ಎ) ರ ಅನುಸಾರ ಶಿಸ್ತು ಕ್ರಮ ಕೈಗೊಳ್ಳುವ ಷರತ್ತಿಗೊಳಪಟ್ಟು ಹಿಂಪಡೆದಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ.
3. ಶ್ರೀ ಎ.ಎಲ್. ಪೂಜಾರ್, ನಿವೃತ್ತ ಜಿಲ್ಲಾ ಮತ್ತು ಸೆಶೆನ್ಸ್ ನ್ಯಾಯಾಧೀಶರು, ಮನೆ ನಂ.760, ಸೋಮೇಶ್ವರ, 14ನೇ ಮೇನ್, ಜ್ಯುಡಿಶಿಯಲ್ ಲೇಔಟ್, ಜಿಕೆವಿಕೆ ಪೋಸ್ಟ್, ಬೆಂಗಳೂರು.
4. ಸಹಾಯಕ ಕಾರ್ಯದರ್ಶಿ ,ಜಿಲ್ಲಾ ಪಂಚಾಯತಿ, ಕೋಲಾರ.
5. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಇವರ ಮುಖಾಂತರ).

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.